<u>ಸಾಕ್ಷಿಯನ್ನು ದಿನಾಂಕಃ **04-07-2025** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ **8 ನೇ ಪ್ರತಿವಾದಿ ಪರ ಶ್ರೀ. ಬಿ.ಟಿ.ಹೆಚ್ ವಕೀಲರವರಿಂದಃ**</u>

ಪ್ರಮಾಣ ಪತ್ರವನ್ನು ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದಿಯರು ಈ ದಾವೆಯುಲ್ಲಿ ಕೇಳಿರುವ ಪರಿಹಾರಗಳ ಕುರಿತು ಮಾಹಿತಿ ಇರುವುದಿಲ್ಲ. ಪ್ರತಿವಾದಿಗಳು ನನಗೆ 35-40 ವರ್ಷಗಳಿಂದ ಪರಿಚಯ ಇರುವವರು. 1 ರಿಂದ 7 ನೇ ಪ್ರತಿವಾದಿಯರು ನಮ್ಮ ಏರಿಯಾದವರು ಎಂದರೆ ಸರಿ. ವಾದಿ ಮತ್ತು 1 ರಿಂದ 7 ನೇ ಪ್ರತಿವಾದಿಗಳು ನನಗೆ ಸಂಬಂಧಿಕರು ಆಗಬೇಕು ಎಂದರೆ ಸರಿಯಲ್ಲ. ಅವರು ನನ್ನ ಕುಲಸ್ಥರು ಎಂದರೆ ಸರಿ. ವಾದಿ ಮತ್ತು 1 ರಿಂದ 7 ನೇ ಪ್ರತಿವಾದಿಗಳ ಮನೆತನಕ್ಕೆ ದಾವ ಸ್ವತ್ತಅನ್ನು ಹೊರತುಪಡಿಸಿ ಬೇರೆ ಆಸ್ತಿ ಇದೆಯೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದು ನುಡಿದರು. ವಾದಿಯು ದಾವ ಸ್ವತ್ತು ಸ್ವಾಧಿನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯ ಉತ್ತರಕ್ಕೆ ರಾಜಣ್ಣ ರವರ ಸುಬ್ಬಣ್ಣ ರವರ ಹೊಲ, ಪೂರ್ವಕ್ಕೆ ಕೊರವರ ಹೊಲ, ದಕ್ಷಿಣಕ್ಕೆ ಹಳ್ಳ ಮತ್ತು ಪಶ್ಚಿಮಕ್ಕೆ ನಮ್ಮ ದೇವಾಸ್ಥಾನಕ್ಕೆ ಸಂಬಂಧಪಟ್ಟ ದಾವೆ ಸರ್ವೇ ನಂಬರ್. ದಾವ ಆಸ್ತಿಯ ಸುತ್ತಮುತ್ತ ನಮ್ಮ ಜಮೀನು ಇರುವುದಿಲ್ಲ. 8 ನೇ ಪ್ರತಿವಾದಿಯ ತಂದೆ ನನ್ನ ಪರಿಚಯಸ್ಥರು ಎಂದರೆ ಸರಿಯಲ್ಲ. ದಾವೆ ಆಸ್ತಿಯನ್ನು 8 ನೇ ಪ್ರತಿವಾದಿ ಖರೀದಿಸುವ ಕಾಲಕ್ಕೆ ವ್ಯವಹಾರದಲ್ಲಿ ನಾನು ಭಾಗಿದ್ದೇನೆ ಎಂದರೆ ಸರಿಯಲ್ಲ. 2011 ರಿಂದ ಇಲ್ಲಿಯವರೆಗೂ 8 ನೇ ಪ್ರತಿವಾದಿಯ ದಾವ ಆಸ್ತಿ ಸ್ವಾಧೀನದಲ್ಲಿ ಇದ್ದು ಬಿತ್ತನೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 1 ರಿಂದ 7 ನೇ ಪ್ರತಿವಾದಿಯರು ಈಗ ನಮ್ಮ ಏರಿಯಾದಲ್ಲಿ ಇರುವುದಿಲ್ಲ ಮತ್ತು ಬೇರೆ ಕಡೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಹಿ/-

04-07-2025

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ,